ಅನುದಾನಿತ ಶಿಕ್ಷಣ ಸಂಸ್ಥೆಗಳ ಸ್ಥಿತಿಗತಿ

118 (936) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅನುದಾನಕ್ಕಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳು ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು;

ಆ) ಅನುದಾನ ಮಂಜೂರಾಗಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಎಷ್ಟು;

ಇ) ಅನುದಾನ ಬಾಕಿ ಇರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಎಷ್ಟು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಈಗಿನ cut-off ವರ್ಷದ (1994–95) ಅನುಗುಣವಾಗಿ ಶಾಲೆಗಳು ಸಹಾಯಾನುದಾನಕ್ಕೆ ಒಳಪಡಿಸಲು ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಈ ಕೆಳಕಂಡಂತಿವೆ :–

ಪ್ರಾಥಮಿಕ ಶಾಲೆಗಳು	–	521
ಪ್ರೌಢಶಾಲೆಗಳು	–	440
ಪದವಿ ಪೂರ್ವ ಕಾಲೇಜುಗಳು	–	215
ಒಟ್ಟು	–	**1176**

ಆ) ದಿನಾಂಕ: 01–06–1987 ರಿಂದ 1994–95ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ಯಾವುದೇ ವಿಚ್ಛಿನ್ನತೆ ಇಲ್ಲದೇ ಸತತವಾಗಿ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ, ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಆಸ್ಪದ ಕಲ್ಪಿಸಲಾಗಿದೆ. ಇದರನ್ವಯ 373 ಪ್ರಾಥಮಿಕ ಶಾಲೆಗಳು, 384 ಪ್ರೌಢಶಾಲೆಗಳು ಹಾಗೂ 111 ಪದವಿ ಪೂರ್ವ ಕಾಲೇಜುಗಳು ಸಹಾಯಾನು ದಾನಕ್ಕೆ ಒಳಪಟ್ಟಿರುತ್ತವೆ.

ಇ) ಪ್ರಾಥಮಿಕ ಶಾಲೆಗಳು	–	521
ಪ್ರೌಢಶಾಲೆಗಳು	–	440
ಪದವಿ ಪೂರ್ವ ಕಾಲೇಜುಗಳು	–	215
ಒಟ್ಟು	–	**1176**

ಪ್ರಸ್ತುತ ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿದ್ದು, ಆರ್ಥಿಕ ಮಿತವ್ಯಯ ಆದೇಶ ಹಿತೆಗೆದುಕೊಂಡ ನಂತರ, ಬಾಕಿ ಇರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ನಿಯಮಾನುಸಾರವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಯು.ಟಿ. ಖಾದರ್ : ಕಳೆದ ಎರಡು ವರ್ಷಗಳಿಂದ ಸತತವಾಗಿ ಹಲವಾರು ಅರ್ಹತೆ ಇರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳವರು grant-in-aid ಗೆ ಅರ್ಜಿ ಸಲ್ಲಿಸುತ್ತಿದ್ದಾರೆ. ಈ ಮಧ್ಯೆ election ಬಂತು. ಅದಲ್ಲದೆ, financial sanction ಎಂದು ಈಗ ತಡೆಹಿಡಿದುಕೊಂಡಿದ್ದಾರೆ. ಜೊತೆ ಜೊತೆಯಲ್ಲಿ ಕೊಡುವಾಗ ಕೆಲವು ಶಾಲೆಗಳಿಗೆ ಕೊಟ್ಟಿದ್ದಾರೆ, ಕೆಲವು ಶಾಲೆಗಳಿಗೆ ಕೊಟ್ಟಿಲ್ಲ. 3 ತಿಂಗಳು, 6 ತಿಂಗಳಾಗಿದ್ದರೆ ನಾವು financial sanction ನಿಂದ ಆದ ತೊಂದರೆ, ಆರ್ಥಿಕ ಸಮಸ್ಯೆ ಎಂದು ಒಪ್ಪಬಹುದು. ಆದರೆ, ಒಂದು ವರ್ಷ, ಎರಡು ವರ್ಷ, 2–2 ಬಜೆಟ್ ಮಂಡನೆಯಾದರೂ ಸಹ ಮತ್ತೆ ಅದೇ ಕಾರಣವನ್ನು ನೀಡುವುದು ಸರಿಯಲ್ಲ. Grant-in-aid ಕೊಡುತ್ತೇವೆಂದು ನೀವೊಂದು ಯೋಜನೆ ರೂಪಿಸುತ್ತೀರಿ. 2–2 ಬಜೆಟ್ ಮಂಡನೆಯಾದರೂ ಈ ಶಾಲೆಗಳಿಗೆ financial sanction ಎಂದು ತಡೆಹಿಡಿಯುವುದು ಸರಿಯಲ್ಲ. ಆದಷ್ಟು ಬೇಗ ಇದನ್ನು ಮಂಜೂರು ಮಾಡಿಕೊಡಬೇಕು. ನನ್ನ ಕ್ಷೇತ್ರದಲ್ಲಿ 2–3 ಶಾಲೆಗಳಿವೆ. ಸುಮಾರು lecturers ವಿಧಾನಸೌಧ ಅಲೆದು, ನಮ್ಮನ್ನೂ ಕೇಳುತ್ತಿದ್ದಾರೆ. ಹಾಗಾಗಿ, ಇದಕ್ಕೊಂದು ಅಂತ್ಯ ಹಾಡಬೇಕು. 80 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಮಂಡಿಸಿದರೂ ಕೂಡ ಶಿಕ್ಷಕರಿಗೆ financial sanction ಎಂದು ತಡೆಹಿಡಿಯುವುದು ಸರಿಯಲ್ಲ. ಇದಾಗಬಾರದು. ಹಾಗಾಗಿ, financial sanction ಏನಿದೆ ಅದನ್ನು ರದ್ದುಪಡಿಸಿ, ತಕ್ಷಣ ಎಲ್ಲಾ ಶಾಲೆಗಳಿಗೆ grant-

in-aid ಕೊಟ್ಟು ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಖಾದರ್‌ರವರ ಭಾವನೆಯನ್ನು ನಾನು ಅರ್ಥೈಸಿಕೊಳ್ಳಬಲ್ಲೆ. ತಾವು ಹೇಳಿರುವುದು ವಾಸ್ತವಿಕ ಅಂಶ. ಆದರೆ, ನಮ್ಮ ಸರ್ಕಾರದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಬಗ್ಗೆ ಅವರು ಮಾಡುತ್ತಿರುವಂಥ ಕೆಲಸ ಕಾರ್ಯಗಳನ್ನು ನಾವು ಪ್ರೋತ್ಸಾಹಿಸುವುದ ಕ್ಕೋಸ್ಕರವಾಗಿ 1995ನೇ ಇಸವಿಯಿಂದ ಪ್ರಾರಂಭಿಸಿದಂಥ ಶಿಕ್ಷಣ ಸಂಸ್ಥೆಗಳನ್ನು ಅನುದಾನಕ್ಕೊಳಪಡಿಸುವಂಥ ನಿರ್ಣಯವನ್ನು ಮಾಡಿದ್ದೇವೆ ಅಂದರೆ, ನಮಗೆ ಆ ಸಂಸ್ಥೆಗಳ ಬಗ್ಗೆ ಕಾಳಜಿ ಇದೆ ಮತ್ತು ನಮ್ಮ ಪ್ರಾಮುಖ್ಯತೆ ಶಿಕ್ಷಣ ಕ್ಷೇತ್ರಕ್ಕೆ ಇದೆ ಎನ್ನುವುದನ್ನು ಮತ್ತೊಮ್ಮೆ ನಾವು ಸಾಬೀತು ಮಾಡಿ ತೋರಿಸಿದ್ದೇವೆ. ಆದರೆ, ತಮಗೆಲ್ಲ ಗೊತ್ತಿರುವ ಹಾಗೆ, 2009ರ ಅಕ್ಟೋಬರ್‌ನಲ್ಲಿ ಅತಿವೃಷ್ಟಿ ಆಯಿತು. ರಾಜ್ಯದ 16 ಜಿಲ್ಲೆಗಳು ಅತಿವೃಷ್ಟಿಯಿಂದ ತೊಂದರೆ–ತೊಡಕುಗಳನ್ನು ಅನುಭವಿಸಿವೆ. ಆ ಹಿನ್ನೆಲೆಯಲ್ಲಿ ದಿ: 21–10–2009 ರಲ್ಲಿ ಆರ್ಥಿಕ ಮಿತವ್ಯಯವನ್ನು ಹಣಕಾಸು ಇಲಾಖೆ ನಮ್ಮ ಇಲಾಖೆಯ ಮೇಲೆಯೂ ಹೇರಿತು. ಆ ಆರ್ಥಿಕ ಮಿತವ್ಯಯವನ್ನು ಸಡಿಲಗೊಳಿಸುವವರೆಗೆ ನೀವು ಯಾವುದೇ ಸಂಸ್ಥೆಯನ್ನು ಅನುದಾನಕ್ಕೊಳ ಪಡಿಸಬಾರದೆನ್ನುವ ಸೂಚನೆಯನ್ನು ಹಣಕಾಸು ಇಲಾಖೆ ನಮಗೆ ಕಳುಹಿಸಿದೆ. ಆ ನಂತರದಲ್ಲಿ ಸಾಕಷ್ಟು ಬೆಳವಣಿಗೆಗಳಾಗಿವೆ. ಅದರ ಹಿನ್ನೆಲೆಯಲ್ಲಿ ನಾವು ಇದುವರೆಗೆ 1995ನೇ ಇಸವಿಯಿಂದ ಪ್ರಾರಂಭಿಸಿದಂಥ ಸುಮಾರು 700 ಸಂಸ್ಥೆಗಳಿಗೆ ಅಂದರೆ ಸುಮಾರು 4000 ಶಿಕ್ಷಕರನ್ನು ಅನುದಾನಕ್ಕೊಳಪಡಿಸಿ ವೇತನ ಬಿಡುಗಡೆ ಮಾಡಿದ್ದೇವೆ. ಆದರೆ, ತಾವು ಹೇಳಿದಂತೆ, ಇನ್ನೂ ಕೆಲವು pipeline ನಲ್ಲಿರುವಂಥದ್ದಿದೆ. ಅದೆಲ್ಲವೂ ಸೇರಿದರೆ ನಾನು ಉತ್ತರದಲ್ಲಿ ಹೇಳಿರುವಂತೆ ಸುಮಾರು 1176 ಸಂಸ್ಥೆಗಳಿಗೆ ಇನ್ನೂ ನಾವು ಕೊಡಬೇಕಾ ದಂಥದ್ದಿದೆ. ಹಾಗಾಗಿ, ಆರ್ಥಿಕ ಮಿತವ್ಯಯ ಆದೇಶವನ್ನು ಸಡಿಲಗೊಳಿಸಿ, ಈ ಅನುದಾನ ಪ್ರಕ್ರಿಯೆಯನ್ನು ಮುಂದುವರೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾವೆಲ್ಲರೂ ವಿನಂತಿಸಿಕೊಂಡಿದ್ದೇವೆ. ಅದರಂತೆ ಬರುವ ದಿನಗಳಲ್ಲಿ ನಾವು ಕಾರ್ಯ ಪ್ರವೃತ್ತರಾಗುತ್ತೇವೆ.

ಶ್ರೀ ಯು.ಟಿ. ಖಾದರ್ : ನಾನು ಮಾನ್ಯ ಸಚಿವರ ಹೇಳಿಕೆಯನ್ನು ಸ್ವಾಗತಿಸುತ್ತೇವೆ. ಮಾನ್ಯ ಸಚಿವರಿಗೆ ಶಿಕ್ಷಣದ ಬಗ್ಗೆ ಇರುವ ಕಳಕಳಿ, grant-in-aid ಕೊಡುವ ಬಗ್ಗೆ ಇರುವ ಕಳಕಳಿಯನ್ನು ನಾವು ಸ್ವಾಗತಿಸುತ್ತೇವೆ. ಇದು ನನ್ನ ಭಾವನೆಯಲ್ಲ. ನಮಗೆ ಮಾನ್ಯ ಸಚಿವರ ಬಗ್ಗೆ ಗೌರವ, ವಿಶ್ವಾಸವಿದೆ. ಆದರೆ, ಕೆಲವರಿಗೆ ಮತ್ತು ಜನಸಾಮಾನ್ಯರಲ್ಲಿ, ಶಿಕ್ಷಕರಲ್ಲಿ ಏನು ಭಾವನೆ ಇದೆ ಎಂದರೆ, ಸರ್ಕಾರದವರು ಒಂದು ಯೋಜನೆ ರೂಪಿಸಿದರು, ಯಾರಿಗೆ ಬೇಕೋ ಅವರಿಗೆ ಕೊಟ್ಟರು, ಯಾರಿಗೆ ಕೊಡಲಿಕ್ಕೆ ಮನಸ್ಸಿನಲ್ಲವೋ ಆರ್ಥಿಕ sanction ಎಂದು ಹೇಳಿ ಕೊಡುವುದಿಲ್ಲವೆನ್ನುವ ಭಾವನೆಯಂತೂ ಬಂದಿದೆ. ಅದನ್ನು ತಪ್ಪಿಸಬೇಕಾಗುತ್ತದೆ. ಬೇರೆಯದಕ್ಕೆಲ್ಲಾ ಇಷ್ಟೆಲ್ಲಾ ಹಣ ಕೊಡುತ್ತಿರುವಾಗ ಇದಕ್ಕೆ ಏಕೆ ಕೊಡುವುದಕ್ಕಾಗುವುದಿಲ್ಲ. Financial sanction ಅನ್ನು ರದ್ದುಪಡಿಸಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಾವು ಹೇಳುವ ಹಾಗೆ, ಆ ಭಾವನೆಗಳು ಮೂಡುವುದಕ್ಕೆ ಅವಕಾಶವಿದೆ. ಏಕೆಂದರೆ, ವಿರೋಧಿಗಳು ಬೇಕಾದಂಥ ಅಭಿಪ್ರಾಯವನ್ನು ಮೂಡಿಸುವುದಕ್ಕೆ ಅವರದೇ ಆದ ಪ್ರಯತ್ನಗಳನ್ನು ಮಾಡುತ್ತಿರುತ್ತಾರೆ. ಆದರೆ, ನಾನು ಈ ಸದನದ ಮೂಲಕ, ತಮ್ಮ ಮೂಲಕ ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿರುವವರಿಗೆ ಎಲ್ಲರಿಗೂ ಸ್ಪಷ್ಟಪಡಿಸುವುದಕ್ಕೆ ಬಯಸುತ್ತಿದ್ದೇನೆ. ಏನೆಂದರೆ, ನಾವು ನಮ್ಮ ಆರ್ಥಿಕ ಮಿತವ್ಯಯ ಆದೇಶ ತೆಗೆದ ನಂತರದಲ್ಲಿ ಹಿಂದೆ ಹೇಗೆ ನಾವು 700 ಸಂಸ್ಥೆಗಳಿಗೆ ಕೊಟ್ಟಿದ್ದೇವೆಯೋ ಹಾಗೆಯೇ ಮುಂದಿನ 1100 ಸಂಸ್ಥೆಗಳಿಗೆ ಕೊಡುವಂಥ ಪ್ರಕ್ರಿಯೆಯನ್ನು ನಾವು ಮುಂದುವರೆಸುತ್ತೇವೆ. ಇದರಲ್ಲಿ ಯಾವುದೇ ರೀತಿಯಾದ ರಾಜಕಾರಣ, ತಾರತಮ್ಯ ಇತ್ಯಾದಿ ಅಂಶಗಳಿಲ್ಲ. ಆರ್ಥಿಕ ಮಿತವ್ಯಯ ಆದೇಶ ಬಂದಿರುವುದೇ ಒಂದು ತೊಂದರೆ. ಹಾಗಾಗಿ, ಯಾವುದಕ್ಕೆ ಆಗಿದೆ ಅದಕ್ಕೂ ಇನ್ಯಾವ ಕಾರಣಗಳೂ ಇರಲಿಲ್ಲ. ಸಹಜವಾದ ಪ್ರಕ್ರಿಯೆಯಲ್ಲಿ ಅದಾಗಿದೆ. ಆಗದೇ ಇರುವುದಕ್ಕೆ ಈ ಮಿತವ್ಯಯದ ಆದೇಶ ಕಾರಣವಾಗಿದೆ. ಮಾನ್ಯ ಮುಖ್ಯಮಂತ್ರಿಯವರಲ್ಲಿ ಈ ಆರ್ಥಿಕ ಮಿತವ್ಯಯ ಆದೇಶವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ವಿನಂತಿಸಿದ್ದೇವೆ. ಅದನ್ನು ಹಿಂತೆಗೆದುಕೊಂಡ ನಂತರದಲ್ಲಿ ಆ ಪ್ರಕ್ರಿಯೆಯನ್ನು ನಾವು ಪ್ರಾರಂಭಿಸುತ್ತೇವೆ.